# ಅರಫಃ ದಿನದ ಶ್ರೇಷ್ಠತೆಗಳು

فضائل يوم عرفة

< الكنادي >

ಮುಹಮ್ಮದ್ ಸಾಲಿಹ್ ಅಲ್‌ಮುನಜ್ಜಿದ್

محمد صالح المنجد

ಅನುವಾದ: ಮುಹಮ್ಮದ್ ಹಂಝಾ ಪುತ್ತೂರು
ಪರಿಶೀಲನೆ: ಹಸೈನಾರ್ ಸ್ವಲಾಹಿ

ترجمة: محمد حمزة البتوري

مراجعة: حسينار الصلاحي

# ಅರಫಃ ದಿನದ ಶ್ರೇಷ್ಠತೆಗಳು

ಪ್ರಶ್ನೆ: ಅರಫಃ ದಿನದ ಶ್ರೇಷ್ಠತೆಗಳು ಯಾವುವು?

ಉತ್ತರ:

ಅಲ್‌ಹಮ್ದುಲಿಲ್ಲಾಹ್,

ಅರಫಃ ದಿನದ ಕೆಲವು ಶ್ರೇಷ್ಠತೆಗಳು ಹೀಗಿವೆ:

**1. ಅದು ಧರ್ಮವನ್ನು ಪೂರ್ತಿಗೊಳಿಸಲಾದ ಮತ್ತು ಅನುಗ್ರಹವನ್ನು ಪೂರ್ಣಗೊಳಿಸಲಾದ ದಿನ:**

ಸಹೀಹುಲ್ ಬುಖಾರಿ ಮತ್ತು ಸಹೀಹ್ ಮುಸ್ಲಿಮ್‌ನಲ್ಲಿರುವ ಹದೀಸ್:

عَنْ عُمَرَ بْنِ الْخَطَّابِ رَضِيَ اللَّهُ عَنْهُ، أَنَّ رَجُلًا مِنَ الْيَهُودِ قَالَ لَهُ: يَا أَمِيرَ الْمُؤْمِنِينَ، آيَةٌ فِي كِتَابِكُمْ تَقْرَءُونَهَا، لَوْ عَلَيْنَا مَعْشَرَ الْيَهُودِ نَزَلَتْ لَاتَّخَذْنَا ذَلِكَ الْيَوْمَ عِيدًا. قَالَ: أَيُّ آيَةٍ؟ قَالَ: ﴿الْيَوْمَ أَكْمَلْتُ لَكُمْ دِينَكُمْ وَأَتْمَمْتُ عَلَيْكُمْ نِعْمَتِي وَرَضِيتُ لَكُمُ الْإِسْلَامَ دِينًا﴾ [المائدة: 3] قَالَ عُمَرُ: قَدْ عَرَفْنَا ذَلِكَ الْيَوْمَ وَالْمَكَانَ الَّذِي نَزَلَتْ فِيهِ عَلَى النَّبِيِّ ﷺ، وَهُوَ قَائِمٌ بِعَرَفَةَ يَوْمَ الْجُمُعَةِ. رواه البخاري ومسلم.

ಉಮರ್(ﷺ)ರಿಂದ ವರದಿ: ಒಬ್ಬ ಯಹೂದ ವ್ಯಕ್ತಿ ಉಮರ್(ﷺ)ರೊಂದಿಗೆ ಕೇಳಿದ: "ಓ ವಿಶ್ವಾಸಿಗಳ ನಾಯಕರೇ! ನಿಮ್ಮ ಗ್ರಂಥದಲ್ಲಿರುವ ಒಂದು ಆಯತ್ತನ್ನು ನೀವು ಪಾರಾಯಣ ಮಾಡುತ್ತಿರುವಿರಿ. ಆ ಆಯತ್ ಯಹೂದಿಗಳಾದ ನಮ್ಮ ಮೇಲೆ ಅವತೀರ್ಣಗೊಂಡಿರುತ್ತಿದ್ದರೆ ನಾವು ಆ ದಿನವನ್ನು ಹಬ್ಬವನ್ನಾಗಿ ಆಚರಿಸುತ್ತಿದ್ದೆವು." ಉಮರ್(ﷺ) ಕೇಳಿದರು: "ಯಾವ ಆಯತ್?" ಆತ ಹೇಳಿದ: "ಇಂದು ನಾನು ನಿಮಗೆ ನಿಮ್ಮ ಧರ್ಮವನ್ನು ಪೂರ್ತಿಗೊಳಿಸಿದ್ದೇನೆ, ನಿಮ್ಮ ಮೇಲೆ ನನ್ನ ಅನುಗ್ರಹವನ್ನು ಪೂರ್ಣಗೊಳಿಸಿದ್ದೇನೆ ಮತ್ತು ಇಸ್ಲಾಮನ್ನು ನಿಮಗೊಂದು ಧರ್ಮವನ್ನಾಗಿ ನಾನು ತೃಪ್ತಿಪಟ್ಟಿದ್ದೇನೆ." [ಕುರ್‌ಆನ್ 5:3] ಉಮರ್(ﷺ) ಹೇಳಿದರು: "ನಾವು ಆ ದಿನವನ್ನು ಮತ್ತು ಅದು ಪ್ರವಾದಿ(ﷺ)ರವರ ಮೇಲೆ ಅವತೀರ್ಣಗೊಂಡ ಆ ಸ್ಥಳವನ್ನು ನಾವು ಅರಿತಿದ್ದೇವೆ. ಅದು ಪ್ರವಾದಿ(ﷺ)ರವರು ಶುಕ್ರವಾರದಂದು ಅರಫಃದಲ್ಲಿ ನಿಂತಿದ್ದ ಸಂದರ್ಭದಲ್ಲಿ ಅವತೀರ್ಣಗೊಂಡಿತ್ತು." [ಅಲ್‌ಬುಖಾರಿ ಮತ್ತು ಮುಸ್ಲಿಮ್]

**2. ಅದು ಅರಫಃದಲ್ಲಿರುವ ಹಾಜಿಗಳಿಗೆ ಹಬ್ಬದ ದಿನ:**

قَالَ النَّبِيُّ ﷺ : { يَوْمُ عَرَفَةَ وَيَوْمُ النَّحْرِ وَأَيَّامُ التَّشْرِيقِ عِيدُنَا أَهْلِ الإِسْلَامِ، وَهِي أَيَّامُ أَكْلٍ وَشَرْبٍ } رواه أهل السنن.

ಪ್ರವಾದಿ(ﷺ)ರವರು ಹೇಳಿದರು: "*ಅರಫಃ* ದಿನ, ಬಲಿದಿನ ಮತ್ತು *ತಶ್ರೀಕ್‌ನ* ದಿನಗಳು (*ದುಲ್‌ಹಿಜ್ಜಃ* 9, 10, 11, 12 ಮತ್ತು 13) ಇಸ್ಲಾಮಿನ ಜನರಾದ ನಮ್ಮ ಹಬ್ಬಗಳು. ಆ ದಿನಗಳು ತಿನ್ನುವ ಮತ್ತು ಕುಡಿಯುವ ದಿನಗಳು." [ಅಬೂ ದಾವೂದ್, ಅತ್ತಿರ್ಮಿದಿ, ಅನ್ನಸಾಈ, ಇಬ್ನ್ ಮಾಜ]

ಉಮರ್ ಇಬ್ನುಲ್ ಖತ್ತಾಬ್(رضي الله عنه)ರಿಂದ ಹೀಗೆ ವರದಿಯಾಗಿದೆ:

نَزَلَتْ فِي يَوْمِ الْجُمُعَةِ وَيومِ عَرَفَةَ، وَكِلَاهُمَا بِحَمْدِ اللَّهِ لَنَا عِيدٌ.

"ಆ ಆಯತ್ ಶುಕ್ರವಾರದಂದು ಮತ್ತು *ಅರಫಃ* ದಿನದಂದು ಅವತೀರ್ಣಗೊಂಡಿದೆ. ಅಲ್ಲಾಹನಿಗೆ ಸರ್ವಸ್ತುತಿ. ಆ ಎರಡು ದಿನಗಳೂ ನಮಗೆ ಹಬ್ಬದ ದಿನಗಳಾಗಿವೆ."

**3. ಅದು ಆ ದಿನದ ಮೇಲೆ ಅಲ್ಲಾಹು ಆಣೆ ಹಾಕಿದ ದಿನ:**

ಮಹೋನ್ನತನಾದ ಅಲ್ಲಾಹು ಮಹತ್ವವಿರುವ ವಸ್ತುವಿನ ಮೇಲೆಯೇ ಹೊರತು ಆಣೆ ಹಾಕಲಾರನು. ಅವನು ಹೇಳುತ್ತಾನೆ:

﴿ وَشَاهِدٍ وَمَشْهُودٍ ۝٣ ﴾ [البروج : 3].

"ಸಾಕ್ಷಿಯಾಗಿರುವ ದಿನ ಮತ್ತು ಸಾಕ್ಷಿ ವಹಿಸಲಾಗುವ ದಿನದ ಮೇಲಾಣೆ!" [ಕುರ್‌ಆನ್ 85:3]

ಇಲ್ಲಿ ಸಾಕ್ಷಿ ವಹಿಸಲಾಗುವ ದಿನವೆಂದು ಹೇಳಿರುವುದು *ಅರಫಃ* ದಿನವನ್ನಾಗಿದೆ.

عَنْ أَبِي هُرَيْرَةَ رَضِيَ اللَّهُ عَنْهُ أَنَّ النَّبِيَّ ﷺ قَالَ: { الْيَوْمُ الْمَوْعُودُ يَوْمُ الْقِيَامَةِ، وَالْيَوْمُ الْمَشْهُودُ يَوْمُ عَرَفَةَ، وَالشَّاهِدُ يَوْمُ الْجُمُعَةِ. } رواه الترمذي وحسنه الألباني

ಅಬೂ ಹುರೈರಃ(رضي الله عنه)ರಿಂದ ವರದಿ: ಪ್ರವಾದಿ(ﷺ)ರವರು ಹೇಳಿದರು: "ವಾಗ್ದಾನ ಮಾಡಲ್ಪಟ್ಟ ದಿನವು ಅಂತ್ಯದಿನ, ಸಾಕ್ಷಿ ವಹಿಸಲ್ಪಡುವ ದಿನವು *ಅರಫಃ* ದಿನ ಮತ್ತು ಸಾಕ್ಷಿಯಾಗಿರುವ ದಿನವು ಶುಕ್ರವಾರದ ದಿನ." [ಅತ್ತಿರ್ಮಿದಿ; ಅಲ್‌ಅಲ್ಬಾನೀ ಇದನ್ನು ಹಸನ್ ಎಂದಿದ್ದಾರೆ]

ಅಲ್ಲಾಹು ಹೇಳುತ್ತಾನೆ:

﴿ وَٱلشَّفْعِ وَٱلْوَتْرِ ۝٣ ﴾ [الفجر : 3].

"ಸಮ ಮತ್ತು ಬೆಸಗಳ ಮೇಲಾಣೆ!" [ಕುರ್‌ಆನ್ 89:3]

ಇಲ್ಲಿ ಬೆಸ ಎಂದು ಹೇಳಿರುವುದು *ಅರಫಃ* ದಿನವನ್ನಾಗಿದೆ.

ಇಬ್ನ್ ಅಬ್ಬಾಸ್(ﷺ) ಹೇಳುತ್ತಾರೆ:

الشَّفعُ يَوْمُ الْأَضْحَى وَالْوَتْرُ يَوْمُ عَرَفَةَ .

"ಸಮ ಎಂದರೆ *ಅದ್‌ಹಾ* ದಿನ (*ದುಲ್‌ಹಿಜ್ಜಃ* 10ನೇ ದಿನ) ಮತ್ತು ಬೆಸ ಎಂದರೆ *ಅರಫಃ* ದಿನ (*ದುಲ್‌ಹಿಜ್ಜಃ* 9ನೇ ದಿನ)" ಇಕ್ರಿಮಃ ಮತ್ತು ಅದ್ದಹ್ಹಾಕ್ ಕೂಡ ಇದೇ ಅಭಿಪ್ರಾಯವನ್ನು ಹೇಳಿದ್ದಾರೆ.

**4. ಆ ದಿನದಲ್ಲಿ ಆಚರಿಸುವ ಉಪವಾಸವು ಎರಡು ವರ್ಷಗಳ ಪಾಪಗಳನ್ನು ಅಳಿಸಿಹಾಕುತ್ತದೆ:**

عَنْ أَبِي قَتَادَةَ رَضِيَ اللَّهُ عَنْهُ أَنَّ رَسُولَ اللَّهِ ﷺ سُئِلَ عَنْ صَوْمِ يَوْمِ عَرَفَةَ فَقَالَ: { يُكَفِّرُ السَّنَةَ الْمَاضِيَةَ وَالسَّنَةَ الْقَابِلَةَ } رواه مسلم.

ಅಬೂ ಕತಾದಃ(ﷺ)ರಿಂದ ವರದಿ: *ಅರಫಃ* ದಿನದಂದು ಉಪವಾಸ ಆಚರಿಸುವುದರ ಬಗ್ಗೆ ಪ್ರವಾದಿ(ﷺ)ರವರೊಂದಿಗೆ ಕೇಳಲಾದಾಗ ಅವರು ಹೇಳಿದರು: "ಅದು (*ಅರಫಃ* ದಿನದ ಉಪವಾಸ) ಕಳೆದ ವರ್ಷ ಮತ್ತು ಮುಂದಿನ ವರ್ಷದ ಪಾಪಗಳನ್ನು ಅಳಿಸಿಹಾಕುತ್ತದೆ." [ಮುಸ್ಲಿಮ್]

*ಅರಫಃ* ದಿನದ ಉಪವಾಸವು ಸುನ್ನತ್ತಾಗಿರುವುದು ಹಜ್ಜ್‌ನಲ್ಲಿಲ್ಲದವರಿಗೆ ಮಾತ್ರ. ಹಜ್ಜ್‌ನಲ್ಲಿರುವವರಿಗೆ *ಅರಫಃ* ದಿನದಂದು ಉಪವಾಸ ಆಚರಿಸುವುದು ಸುನ್ನತ್ತಿಲ್ಲ. ಯಾಕೆಂದರೆ *ಅರಫಃ*ದಲ್ಲಿರುವಾಗ ಪ್ರವಾದಿ(ﷺ)ರವರು ಆ ದಿನ ಉಪವಾಸ ಆಚರಿಸಿಲ್ಲ. ಮಾತ್ರವಲ್ಲ, *ಅರಫಃ*ದಲ್ಲಿರುವವರು ಅಂದು ಉಪವಾಸ ಆಚರಿಸುವುದನ್ನು ಪ್ರವಾದಿ(ﷺ)ರವರು ವಿರೋಧಿಸಿದ್ದಾರೆಂದು ವರದಿಯಾಗಿದೆ.

**5. ಅದು ಅಲ್ಲಾಹು ಆದಮ್ ಸಂತತಿಗಳಿಂದ ಕರಾರನ್ನು ಪಡೆದುಕೊಂಡ ದಿನ:**

عَنِ ابْنِ عَبَّاسٍ رَضِيَ اللَّهُ عَنْهُمَا قَالَ: قَالَ رَسُولُ اللَّهِ ﷺ : { إِنَّ اللَّهَ أَخَذَ الْمِيثَاقَ مِنْ ظَهْرِ آدَمَ بِنَعْمَانَ يَعْنِي عَرَفَةَ وَأَخْرَجَ مِنْ صُلْبِهِ كُلَّ ذُرِّيَّةٍ ذَرَأَهَا، فَنَثَرَهُمْ بَيْنَ يَدَيْهِ كَالذَّرِّ، ثُمَّ كَلَّمَهُمْ قِبَلًا، قَالَ: ﴿ وَإِذْ أَخَذَ رَبُّكَ مِنۢ بَنِيٓ ءَادَمَ مِن ظُهُورِهِمْ ذُرِّيَّتَهُمْ وَأَشْهَدَهُمْ عَلَىٰٓ أَنفُسِهِمْ أَلَسْتُ بِرَبِّكُمْ ۖ قَالُوا۟ بَلَىٰ شَهِدْنَآ ۛ أَن تَقُولُوا۟ يَوْمَ ٱلْقِيَٰمَةِ إِنَّا كُنَّا عَنْ هَٰذَا غَٰفِلِينَ ﴿١٧٢﴾ أَوْ تَقُولُوٓا۟ إِنَّمَآ أَشْرَكَ ءَابَآؤُنَا مِن قَبْلُ وَكُنَّا ذُرِّيَّةً مِّنۢ بَعْدِهِمْ ۖ أَفَتُهْلِكُنَا بِمَا فَعَلَ ٱلْمُبْطِلُونَ ﴿١٧٣﴾ ﴾ [الأعراف : 172-173] . } رواه أحمد وصححه الألباني.

ಇಬ್ನ್ ಅಬ್ಬಾಸ್(ﷺ)ರಿಂದ ವರದಿ: ಪ್ರವಾದಿ(ﷺ)ರವರು ಹೇಳಿದರು: "ಖಂಡಿತವಾಗಿಯೂ ಅಲ್ಲಾಹು *ನಅ್ಮಾನ್* ಎಂಬ ಸ್ಥಳದಲ್ಲಿ, ಅಂದರೆ *ಅರಫಃ*ದಲ್ಲಿ ಆದಮ್(ﷺ)ರವರ ಬೆನ್ನುಮೂಳೆಯಿಂದ ಕರಾರನ್ನು ಪಡೆದುಕೊಂಡನು. ಅಲ್ಲಾಹು ಅವರ ಬೆನ್ನುಮೂಳೆಯಿಂದ ಅವರ ಎಲ್ಲ ಸಂತತಿಗಳನ್ನು ಹೊರತೆಗೆದು ತನ್ನ ಮುಂದೆ ಹಬ್ಬಿಸಿದನು. ತರುವಾಯ ಅವರೊಂದಿಗೆ ಮಾತನಾಡಿದನು. ಅಲ್ಲಾಹು ಕುರ್‌ಆನ್‌ನಲ್ಲಿ ಹೇಳುತ್ತಾನೆ: "ತಮ್ಮ ರಬ್ಬ್ ಆದಮ್(ﷺ)ರವರ ಸಂತತಿಗಳಿಂದ, ಅವರ ಬೆನ್ನುಗಳಿಂದ ಅವರ ಸಂತತಿಗಳನ್ನು ಹೊರತೆಗೆದು, ಅವರ ವಿಷಯದಲ್ಲಿ ಅವರನ್ನೇ ಸಾಕ್ಷಿಯಾಗಿ ನಿಲ್ಲಿಸಿದ ಸಂದರ್ಭವನ್ನು ಸ್ಮರಿಸಿರಿ. ಅಲ್ಲಾಹು ಕೇಳಿದನು: 'ನಾನು ನಿಮ್ಮ ರಬ್ಬ್ ಅಲ್ಲವೇ?' ಅವರು ಹೇಳಿದರು: 'ಹೌದು, ನಾವು ಸಾಕ್ಷ್ಯ ವಹಿಸಿರುವೆವು' 'ಖಂಡಿತವಾಗಿಯೂ ನಾವು ಇದರ ಬಗ್ಗೆ ಅಲಕ್ಷ್ಯರಾಗಿದ್ದೆವು' ಎಂದು ಪುನರುತ್ಥಾನ ದಿನದಂದು ನೀವು ಹೇಳುವಿರಿ ಎಂಬುದರಿಂದ ಹೀಗೆ ಮಾಡಲಾಯಿತು. ಅಥವಾ 'ಇದಕ್ಕಿಂತ ಮುಂಚೆಯೇ ನಮ್ಮ ಪೂರ್ವಿಕರು ಅಲ್ಲಾಹನೊಂದಿಗೆ ಸಹಭಾಗಿತ್ವ (ಶಿರ್ಕ್) ಮಾಡಿದ್ದರು. ನಾವು ಅವರ ನಂತರ ಸಂತತಿಗಳಾಗಿ ಬಂದವರು ಮಾತ್ರವಾಗಿರುವೆವು. ಹೀಗಿರುವಾಗ ಆ ಅಸತ್ಯವಾದಿಗಳು ಮಾಡಿರುವುದರ ನಿಮಿತ್ತ ನೀನು ನಮ್ಮನ್ನು ನಾಶ ಮಾಡುವೆಯಾ?' ಎಂದು ನೀವು ಹೇಳುವಿರಿ ಎಂಬುದರಿಂದ ಹೀಗೆ ಮಾಡಲಾಯಿತು." [ಕುರ್‌ಆನ್ 7:172–173] [ಅಹ್ಮದ್; ಅಲ್‌ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ.]

ಈ ದಿನಕ್ಕಿಂತಲೂ ಮಹತ್ವಪೂರ್ಣವಾದ ಬೇರೆ ದಿನವಿಲ್ಲ. ಈ ಕರಾರಿಗಿಂತಲೂ ಮಹತ್ವಪೂರ್ಣವಾದ ಬೇರೆ ಕರಾರಿಲ್ಲ.

**6. ಅದು ಪಾಪಗಳನ್ನು ಕ್ಷಮಿಸುವ, ನರಕಾಗ್ನಿಯಿಂದ ವಿಮೋಚನೆ ನೀಡಲಾಗುವ ಮತ್ತು *ಅರಫಃ*ದಲ್ಲಿರುವ ಹಾಜಿಗಳ ಬಗ್ಗೆ ಅಲ್ಲಾಹು ತನ್ನ ಮಲಕ್‌ಗಳೊಂದಿಗೆ ಪ್ರಶಂಸೆಯ ಮಾತುಗಳನ್ನಾಡುವ ದಿನ:**

عَنْ عَائِشَةَ رَضِيَ اللَّهُ عَنْهَا عَنِ النَّبِيِّ ﷺ قَالَ: { مَا مِنْ يَوْمٍ أَكْثَرَ مِنْ أَنْ يُعْتِقَ اللَّهُ فِيهِ عَبْدًا مِنَ النَّارِ مِنْ يَوْمِ عَرَفَةَ، وَإِنَّهُ لَيَدْنُو ثُمَّ يُبَاهِي بِهِمُ الْمَلَائِكَةَ فَيَقُولُ: مَا أَرَادَ هَؤُلَاءِ؟ } رواه مسلم.

ಆಯಿಶಾ(ﷺ)ರಿಂದ ವರದಿ: ಪ್ರವಾದಿ(ﷺ)ರವರು ಹೇಳಿದರು: "*ಅರಫಃ* ದಿನದಲ್ಲಿ (*ದುಲ್‌ಹಿಜ್ಜಃ* 9ರಂದು) ಅಲ್ಲಾಹು ದಾಸರನ್ನು ನರಕಾಗ್ನಿಯಿಂದ ವಿಮೋಚನೆಗೊಳಿಸುವಷ್ಟು ಇತರ ಯಾವುದೇ ದಿನದಲ್ಲೂ ಅವನು ವಿಮೋಚನೆಗೊಳಿಸುವುದಿಲ್ಲ. ಆ ದಿನ ಅವನು *ಅರಫಃ*ದಲ್ಲಿರುವ ಹಾಜಿಗಳ ಹತ್ತಿರಕ್ಕೆ ಬರುವನು. ನಂತರ ಅವರ ಬಗ್ಗೆ ಮಲಕ್‌ಗಳೊಂದಿಗೆ ಪ್ರಶಂಸೆಯ ಮಾತುಗಳನ್ನಾಡುತ್ತಾ ಹೇಳುವನು: ಇವರೆಲ್ಲರೂ ಏನು ಬಯಸುತ್ತಿದ್ದಾರೆ?" [ಮುಸ್ಲಿಮ್]

عَنِ ابْنِ عُمَرَ رَضِيَ اللَّهُ عَنْهُ أَنَّ النَّبِيَّ ﷺ قَالَ : { إِنَّ اللَّهَ تَعَالَى يُبَاهِي مَلَائِكَتَهُ عَشِيَّةَ عَرَفَةَ بِأَهْلِ عَرَفَةَ، فَيَقُولُ: انْظُرُوا إِلَى عِبَادِي أَتَوْنِي شُعْثًا غُبْرًا } رواه أحمد وصححه الألباني.

ಇಬ್ನ್ ಉಮರ್(ﷺ)ರಿಂದ ವರದಿ: ಪ್ರವಾದಿ(ﷺ)ರವರು ಹೇಳಿದರು: "ಖಂಡಿತವಾಗಿಯೂ ಅಲ್ಲಾಹು *ಅರಫಃ* ದಿನದಂದು *ಅರಫಃ*ದಲ್ಲಿರುವ ಹಾಜಿಗಳ ಬಗ್ಗೆ ತನ್ನ ಮಲಕ್‌ಗಳೊಂದಿಗೆ ಪ್ರಶಂಸೆಯ ಮಾತುಗಳನ್ನಾಡುತ್ತಾ ಹೇಳುವನು: ನನ್ನ ದಾಸರ ಕಡೆಗೆ ನೋಡಿ, ಅವರು ಕೆದರಿದ ಕೂದಲಿನೊಂದಿಗೆ ಮತ್ತು ಧೂಳು ತುಂಬಿದ ಬಟ್ಟೆಗಳೊಂದಿಗೆ ನನ್ನ ಬಳಿಗೆ ಬಂದಿದ್ದಾರೆ." [ಅಹ್ಮದ್; ಅಲ್‌ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ.]

ಹೆಚ್ಚು ಬಲ್ಲವನು ಅಲ್ಲಾಹು.

وَصَلَّى اللهُ وَسَلَّمَ عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِين .

*********

IslamHouse.com